**ಹೆಚ್ಚುವರಿ ಸಿವಿಲ್ ಮತ್ತು ಜೆ.ಎಮ್. ಎಫ್. ಸಿ ನ್ಯಾಯಾಧೀಶರ ನ್ಯಾಯಾಲಯ ಯಾದಗಿರಿ.**

**ಸಿಸಿ ನಂ. 844/2017**

| | | |
|---|---|---|
| ಸಾಕ್ಷಿಯ ಹೆಸರುಃ | ನಿಂಗಪ್ಪ | ಪ್ರಾಸಾಃ 3 |
| ತಂದೆ/ಗಂಡನ ಹೆಸರುಃ | ಗೊವಿಂದಪ್ಪ | ಚಾಸಾಃ 7 |
| ವಯಸ್ಸು ಃ | 57 ವರ್ಷ | ದಿಃ 10-03-2023 |
| ಉದ್ಯೋಗಃ | ಒಕ್ಕಲುತನ | ಸಾಕ್ಷಿದಾರರಿಗೆ ಪ್ರಮಾಣ ವಚನ ಭೋದಿಸಲಾಯಿತು. |
| ವಾಸ ಸ್ಥಳಃ | ಯರಗೋಳ | |

**<u>ಮುಖ್ಯ ವಿಚಾರಣೆ ಮಾನ್ಯ ಸಹಾಯಕ ಸರ್ಕಾರಿ ಅಬಿಯೋಜಕರವರಿಂದಃ</u>**

ನನಗೆ ಚಾಸಾಃ 1 ರಿಂದ 6 ಮತ್ತು 8, 9 ರವರ ಪರಿಚಯವಿದೆ. ನನಗೆ ಆರೋಪಿತರ ಪರಿಚಯವಿದೆ. ಸುಮಾರು 7-8 ವರ್ಷಗಳ ಮುಂಚೆ ನಾವು ಕಟ್ಟಿಗೆ ತರಲು ಬೆಟ್ಟಕ್ಕೆ ಹೋಗಿ ಮರಳಿ ಬರುವಾಗ ಎಲ್ಲಾ ಆರೋಪಿತರು ಹೊಲದಲ್ಲಿ ಬಿತ್ತನೆ ಮಾಡುತ್ತಿರುವುದನ್ನು ನೋಡಿರುತ್ತೇನೆ. ಹೊಲದಲ್ಲಿ ಜಗಳ ನಡೆದಿರುವುದನ್ನು ನಾನು ನೋಡಿರುತ್ತೇನೆ. ನಾನು ಚಾಸಾಃ 1 ರವರಿಗೆ ಫೋನಿನ ಮುಖಾಂತರ ಮಾಹಿತಿಯನ್ನು ತಿಳಿಸಿರುತ್ತೇನೆ. ಚಾಸಾಃ 1 ಮತ್ತು ಚಾಸಾಃ 6 ರವರು 3-30 ಗಂಟೆ ಸುಮಾರಿಗೆ ಯರಗೋಳ ಗ್ರಾಮಕ್ಕೆ ಬಂದಿರುತ್ತಾರೆ. ಚಾಸಾಃ 1 ಮತ್ತು 6 ರವರು ಹೊಲಕ್ಕೆ ಹೋಗಿರುತ್ತಾರೆ. ಚಾಸಾಃ 1 ರವರು ಮತ್ತು ಚಾಸಾಃ 6 ರವರು ಆರೋಪಿತರಿಗೆ ನಮ್ಮ ಹೊಲದಲ್ಲಿ ಯಾಕೆ ಬಿತ್ತನೆ ಮಾಡುತ್ತಿದ್ದಿಯಾ? ಎಂದು ಕೇಳಿದಾಗ ಆರೋಪಿತರೆಲ್ಲರೂ ಚಾಸಾಃ 1 ಮತ್ತು ಚಾಸಾಃ 4 ರವರಿಗೆ ಬೋಸಡಿ ಮಕ್ಕಳೇ ಎಂದು ಅವಾಚ್ಯ ಶಬ್ದದಿಂದ ಬೈದಿರುತ್ತಾರೆ. ಆರೋಪಿತರೆಲ್ಲರೂ ಚಾಸಾಃ 1 ಮತ್ತು ಚಾಸಾಃ 4 ರವರಿಗೆ ಖಲಾಸ ಮಾಡುತ್ತೇನೆ ಎಂದು ಜೀವದ ಬೆದರಿಕೆಯನ್ನು ಹಾಕಿರುತ್ತಾರೆ. ಚಾಸಾಃ 1 ಮತ್ತು ಚಾಸಾಃ 4 ರವರು ಭಯದಿಂದ ಘಟನಾ ಸ್ಥಳದಿಂದ ಮರಳಿ ಬಂದಿರುತ್ತಾರೆ. ನಂತರ ಚಾಸಾಃ 1 ಮತ್ತು 4 ರವರು ಪೋಲಿಸ ಠಾಣೆಗೆ ಹೋಗಿರುತ್ತಾರೆ.

**ಪಾಟೀ ಸವಾಲುಃ ಆರೋಪಿ ಪರ ವಕೀಲರು ಶ್ರೀ ಜಿ ಎಸ್ ಎನ್ ಇವರಿಂದ**

ನಾನು ಕಟ್ಟಿಗೆ ತರಲು ಹೋದ ಬೆಟ್ಟ ನಮ್ಮೂರಿಂದ 2 ಕಿ.ಮೀ. ಅಂತರದಲ್ಲಿದೆ. ನಮ್ಮೂರಿಂದ ಬೆಟ್ಟಕ್ಕೆ ಹೋಗಲು 20 ನಿಮಿಷಗಳ ಸಮಯಾವಕಾಶ ಬೇಕು. ಸದರಿ ಬೆಟ್ಟಕ್ಕೆ ಹೋಗಲು ಕಾಲು ದಾರಿ ಇದೆ. ಬೆಟ್ಟಕ್ಕೆ ಹೋಗುವಾಗ ನನ್ನ ಹೊಲ ಮತ್ತು ನಾಯಕರ ಜಮೀನಿನ ನಂತರ ಬೆಟ್ಟಕ್ಕೆ ಹೋಗುವ ದಾರಿ ಬರುತ್ತದೆ. ಬೆಟ್ಟಕ್ಕೆ ಹೋಗಲು 4 ಹೊಲಗಳು ಹತ್ತುತ್ತದೆ. ಸದರಿ 4 ಹೊಲಗಳ ಮಾಲೀಕರು ಯಾರು ಎಂದು ನನಗೆ ಹೇಳಲು ಬರುವುದಿಲ್ಲ. ನಾನು ಚಾಸಾಃ 1 ರವರಿಗೆ 3-00 ಗಂಟೆಗೆ ಕರೆ ಮಾಡಿರುತ್ತೇನೆ. ಸದರಿ ಯಾದಗಿರಿಯಲ್ಲಿ ಚಾಸಾಃ 1 ರವರ ಮನೆಯಿದೆ ಎಂದರೆ ಸಾಕ್ಷಿಯು ಯಾದಗಿರಿ ಮತ್ತು ಬೆಂಗಳೂರಿನಲ್ಲಿ ಮನೆಯಿದೆ ಎಂದು ನುಡಿಯುತ್ತಾರೆ. ಚಾಸಾಃ 1 ರವರು ಹುಟ್ಟಿ ಬೆಳೆದು ಯಾದಗಿರಿಯಲ್ಲಿ ಇರುತ್ತಾನೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ಯರಗೋಳದಲ್ಲಿ ಇರುತ್ತಾನೆ ಎಂದು ನುಡಿಯುತ್ತಾರೆ. ಚಾಸಾಃ 1 ರವರು ಯಾದಗಿರಿಯಲ್ಲಿ ಇರುತ್ತಾರೆ ಎಂದರೆ ಸಾಕ್ಷಿಯು ಯಾದಗಿರಿಯಲ್ಲಿ ಇರುತ್ತಾನೆ ಕೆಲಸ ಇದ್ದಾಗ ಯರಗೋಳಿಗೆ ಬರುತ್ತಾನೆ ಎಂದು ನುಡಿಯುತ್ತಾರೆ. ಸದರಿ ಚಾಸಾಃ 1 ರವರ ಮೊಬೈಲ ಸಂಖ್ಯೆಃ ನನಗೆ ಹೇಳಲು ಬರುವುದಿಲ್ಲ. ನಾನು ನನ್ನ ಮನೆಗೆ ಬಂದ ನಂತರ ಚಾಸಾಃ 1 ರವರಿಗೆ ಕರೆ ಮಾಡಿರುತ್ತೇನೆ. ಸದರಿ ಚಾಸಾಃ 1 ರವರಿಗೆ ಕರೆ ಮಾಡಿ ಜಮೀನು ನಿನ್ನ ಪರವಾಗಿ ಆದೇಶ ಆಗಿದ್ದು ಆರೋಪಿತರೆಲ್ಲರೂ ಬಿತ್ತನೆ ಮಾಡುತ್ತಿದ್ದಾರೆ ಎಂದು ಹೇಳಿರುತ್ತೇನೆ. ಆರೋಪಿತರು ಯಾವ ಜಮೀನಿನಲ್ಲಿ ಬಿತ್ತನೆ ಮಾಡುತ್ತಿದ್ದರು ಅದರ ಸರ್ವೆ ನಂಬರ ನನಗೆ ಹೇಳಲು ಬರುವುದಿಲ್ಲ. ಬಿತ್ತನೆ ಮಾಡುವ ಹೊಲಕ್ಕೆ ಊರಿನಿಂದ ಹೋಗಲು 10 ನಿಮಿಷಗಳ ಸಮಯಾವಕಾಶ ಬೇಕು. ಸದರಿ ಚಾಸಾಃ 1 ರವರಿಗೆ ಕರೆ ಮಾಡಿದ ನಂತರ ಮದ್ಯಾಹ್ನ 3-30 ಗಂಟೆಗೆ ಯರಗೋಳ ಗ್ರಾಮಕ್ಕೆ ಬಂದಿರುತ್ತಾನೆ.

ಸದರಿ ಬಿತ್ತನೆ ಮಾಡುವ ಜಮೀನು ಎಷ್ಟಿದೆ ಎಂದರೆ ಸಾಕ್ಷಿಯು 39 ಎಕರೆ ಇದೆ ಎಂದು ನುಡಿಯುತ್ತಾರೆ. ಸದರಿ 3 ಜಮೀನುಗಳು ಬೇರೆ-ಬೇರೆ ಕಡೆ ಇವೆ. ಮೂರು ಜಮೀನುಗಳಲ್ಲಿ ಒಂದು ಜಮೀನಿನಿಂದ ಬೇರೆ ಜಮೀನಿಗೆ ಹೋಗಲು ಎಷ್ಟು ಅಂತರವಿದೆ ಎಂದರೆ ಸಾಕ್ಷಿಯು ಎರಡೂವರೆ ಕಿ.ಮೀ. ಅಂತರವಿದೆ ಎಂದು ನುಡಿಯುತ್ತಾರೆ. ಸದರಿ ಮೂರು ಜಮೀನುಗಳಿಂದ ಒಡ್ಡನಳ್ಳಿ ಸೀಮೆಯಲ್ಲಿ ಬರುವ ಹೊಲಕ್ಕೆ ಹೋಗಲು ಅಡಮುಡಿ ತಾಂಡಾದ ದಾರಿಯಿಂದ ಹೋಗುತ್ತೇವೆ. ಸದರಿ ಆರೋಪಿತರು ಬಿತ್ತನೆಯನ್ನು ಬೊಳಮಡ್ಡಿಯಲ್ಲಿರುವ ಜಮೀನಿನಲ್ಲಿ ಮಾಡುತ್ತಿದ್ದರು. ಸದರಿ ಬೊಳಮಡ್ಡಿಯಲ್ಲಿರುವ ಹೊಲದ ಮಾಲಿಕರು ಯಾರು ಎಂದರೆ ಸಾಕ್ಷಿಯು ಚಾಸಾಃ 1 ರವರು ಇರುತ್ತಾರೆ ಎಂದು ನುಡಿಯುತ್ತಾರೆ. ನಾನು ಚಾಸಾಃ 1 ರವರು ಮಾಲೀಕರು ಎಂದು ಹೇಳಲು ನಾನು ಯಾವುದೇ ಪಹಣಿಯನ್ನು ನೋಡಿರುವುದಿಲ್ಲ. ಚಾಸಾಃ 1 ರವರು ಮಾಲೀಕರು ಇರುವ ಜಮೀನು

ಎಷ್ಟು ಕ್ಷೇತ್ರ ಇದೆ ಎಂದರೆ ಸಾಕ್ಷಿಯು 39 ಎಕರೆ ಎಂದು ನುಡಿಯುತ್ತಾರೆ. ಸದರಿ ಬಿತ್ತನೆ ಮಾಡುವ ಹೊಲದಲ್ಲಿ 8-9 ಜನ ಇದ್ದರು ನಾನು ಸದರಿ ಜಮೀನಿನಲ್ಲಿ ಇರಲಿಲ್ಲ ಎಂದು ನುಡಿಯುತ್ತಾರೆ. ಸದರಿ ಆರೋಪಿತರು ಯಾರ ಮಾಲೀಕರ ಟ್ರ್ಯಾಕ್ಟರಿನಿಂದ ಬಿತ್ತನೆ ಮಾಡುತ್ತಿದ್ದರು ಎಂದರೆ ಸಾಕ್ಷಿಯು ಮಾಲಿಕರ ಹೆಸರು ನನಗೆ ಹೇಳಲು ಬರುವುದಿಲ್ಲ ಎಂದು ನುಡಿಯುತ್ತಾರೆ. ಟ್ರ್ಯಾಕ್ಟರನ ಬಣ್ಣ ನನಗೆ ಹೇಳಲು ಬರುವುದಿಲ್ಲ. ಆರೋಪಿತರು ಚಾಸಾಃ 1 ಮತ್ತು ಚಾಸಾಃ 4 ರವರಿಗೆ ಬೈದಿದ್ದನ್ನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿತರು ಚಾಸಾಃ 1 ಮತ್ತು ಚಾಸಾಃ 4 ರವರಿಗೆ ಜೀವ ಬೆದರಿಕೆಯನ್ನು ಹಾಕಿದ್ದಾರೆ ಎಂದು ಸುಳ್ಳು ನುಡಿಯತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ಪ್ರಕರಣದ ಬಗ್ಗೆ ನನಗೆ ಮಾಹಿತಿ ಇಲ್ಲ ಮತ್ತು ನೋಡಿಲ್ಲ ಎಂದರೆ ಸರಿ. ಸದರಿ ಆರೋಪಿತರು ಚಾಸಾಃ 1 ಮತ್ತು ಚಾಸಾಃ 4 ರವರ ನಡುವೆ ವೈರತ್ವ ಇದೆ ಎಂದರೆ ಸರಿಯಲ್ಲ. ಆರೋಪಿತರ ನಡುವೆ ಮತ್ತು ಚಾಸಾಃ 1 ಮತ್ತು ಚಾಸಾಃ 4 ರವರ ಸಂಬಂಧ ಚೆನ್ನಾಗಿರಲಿಲ್ಲ ಎಂದರೆ ಸರಿ. ಚಾಸಾಃ 1 ರವರ ಮಾತು ಕೇಳಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿ. ಯಾವುದೇ ಘಟನೆ ನಡೆಯದಿದ್ದರೂ ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ**

(ಸಾಕ್ಷಿ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು).

**ಓ. ಹೇ. ಕೇ. ಸರಿ ಇದೆ.**

**ಹೆಚ್ಚುವರಿ ಸಿವಿಲ್ ಮತ್ತು ಜೆಎಂಎಫ್‌ಸಿ**
**ನ್ಯಾಯಾಧೀಶರು ಯಾದಗಿರಿ**